5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **17**
ಸಿಡಬ್ಲೂ **14**

| | | |
|---|---|---|
| ಹೆಸರು | - | ರೇವಣಪ್ಪ |
| ತಂದೆ ಹೆಸರು | - | ಗಣೇಶಪ್ಪ ಟಿ |
| ವಯಸ್ಸು | - | **45** ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಚಿಟ್ಟೂರು ಗ್ರಾಮ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ **13–08–2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇದ್ದು ಅದನ್ನು ಗುರುತಿಸುತ್ತೇನೆ. ಸದರಿ ದಾಖಲಾತಿ ಪಿಸ್ತೂಲು ಅಮಾನತ್ತು ಪಡಿಸಿಕೊಂಡ ಪಂಚನಾಮೆಯಾಗಿದ್ದು ಅದನ್ನು ನಿಪಿ–**2** ಎಂದು ಈಗಾಗಲೇ ಗುರುತಿಸಲಾಗಿದೆ. ನಿಪಿ–**2** ಸಿ ನನ್ನ ಸಹಿ. ಈಗ ತೋರಿಸಿದ ಮು.ಮಾ.**1** ಪಿಸ್ತೂಲುನ ಕವರಿನ ಮೇಲೆ ಅಂಟಿಸಿದ ಲೇಬಲ್ ಮೇಲಿನ ಸಹಿ ನನ್ನದೇ ಆಗಿರುತ್ತದೆ. ಸದರಿ ಸಹಿಯನ್ನು ಅಂದಜು ಎರಡು ವರ್ಷದ ಹಿಂದೆ ಸೊರಬ ಠಾಣೆಯಲ್ಲಿ ಮಾಡಿರುತ್ತೇನೆ. ಮು.ಮಾ.**1** ನ್ನು ಪೋಲಿಸ್ ಠಾಣೆಯಲ್ಲಿ ಯಾರು ಹಾಜರುಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಜೊತೆ ನಿಪಿ–**2** ಕ್ಕೆ ಚಾಸಃ **15** ಸಹ ಸಹಿ ಮಾಡಿದ್ದಾರೆ. ನನಗೆ ಚಾಸಃ**1** ಮತ್ತು **26** ರವರ ಪರಿಚಯವಿಲ್ಲ. ನಿಪಿ–**2** ಮತ್ತು ಮು.ಮಾ.**1** ಕ್ಕೆ ಅಂಟಿಸಿದ ಚೀಟಿಯ ಮೇಲೆ ಸಹಿ ಮಾಡುವಾಗ ಚಾಸಃ **1** ಮತ್ತು ಚಾಸಃ **26** ಎಲ್ಲಿದ್ದರು ಮತ್ತು ಏನು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ–**2** ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಹೇಳಿದಕ್ಕೆ ಸಹಿ ಮಾತ್ರ ಮಾಡಿರುತ್ತೇನೆ

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ದಿಃ **01-03-2016** ರಂದು ಚಾಸಃ **1** ರವರು ಪಿಸ್ತೂಲಿಂದ ಗುಂಡು ಹಾರಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಅದನ್ನು ಚಾಸಃ **26** ರ ಮುಂದೆ ಹಾಜರುಪಡಿಸಿದರು, ಚಾಸಃ **26** ರವರು ಪರಿಶೀಲನೆ ಮಾಡಿ ಮು.ಮಾ.**1** ವೈಜ್ಞಾನಿಕ ಪರೀಕ್ಷೆಗೆ ಕಳುಹಿಸಿಕೊಡಲು ನನ್ನ ಮುಂದೆ ಅದನ್ನು ಅಮಾನತ್ತು, ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ಪೋಲಿಸರು ಚಾಸಃ **26** ರವರು ಮು.ಮಾ.**1** ನ್ನು ಬಿಳಿಬಟ್ಟೆಯಲ್ಲಿ ಹಾಕಿ ಮೊಹರು ಮಾಡಿ ಅದಕ್ಕೆ ನನ್ನ ಹಾಗೂ ಚಾಸಃ **15** ರವರ ಸಹಿಯುಳ್ಳ ಚೀಟಿ ಅಂಟಿಸಿದ್ದರು ಎಂದರೆ ಸರಿ. ನಾನು ನಿಪಿ-**2** ರಲ್ಲಿ ಬರೆದ ಸಂಪೂರ್ಣ ವಿಷಯವನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಚಾಸಃ**1** ರವರು ಮು.ಮಾ.**1** ನ್ನು ಹಾಜರುಪಡಿಸಿದ ವಿಷಯ ಹಾಗೂ ಚಾಸಃ **26** ರವರು ಮು.ಮಾ.**1** ನ್ನು ಅಮಾನತ್ತು ಪಡಿಸಿಕೊಂಡ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ಆರೋಪಿತರೊಂದಿಗೆ ಶಾಮೀಲಾಗಿ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **5** ರಿಂದ **7** ನೇ ಆರೋಪಿ ಪರ ಶ್ರೀ.ಬಿಕೆವಿ. ವಕೀಲರಿಂದಃ

ನಿಪಿ-2 ನ್ನು ತಯಾರಿಸಿದ ದಿನಾಂಕ ಮತ್ತು ಸಮಯ ನನಗೆ ಜ್ಞಾಪಕವಿಲ್ಲ. ಚಾಸಃ 26 ನನ್ನ ತಾಯಿಯ ಕಡೆ ಸಂಬಂಧಿಕರಾಗಬೇಕು.

ಪಾಟೀ ಸವಾಲುಃ **1** ರಿಂದ **4** ನೇ ಆರೋಪಿ ಪರ ಶ್ರೀ.ಕೆಕೆಎಸ್. ವಕೀಲರಿಂದಃ

(ಶ್ರೀ.ಬಿಕೆವಿ. ವಕೀಲರ ಪಾಟೀ ಸವಾಲನ್ನೇ ಅನುಮೋದಿಸುತ್ತಾರೆ.)

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,<br>ಶಿವಮೊಗ್ಗ, (ಪೀಠಾಸೀನ, ಸಾಗರ)

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ **01/2018**

ಪಿಡಬ್ಲೂ **18**
ಸಿಡಬ್ಲೂ **18**

| | | |
|---|---|---|
| ಹೆಸರು | – | ಡಿ.ಶಿವಪ್ಪ |
| ತಂದೆ ಹೆಸರು | – | ದ್ಯಾವಪ್ಪ |
| ವಯಸ್ಸು | – | **52** ವರ್ಷ |
| ಉದ್ಯೋಗ | – | ವ್ಯವಸಾಯ |
| ವಿಳಾಸಃ | – | ಉದ್ರಿ ಗ್ರಾಮ, ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ **13–08–2018.**

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಈಗ ನ್ಯಾಯಾಲಯದ ಮುಂದೆ ಹಾಜರಾಗಿರುವ ಆರೋಪಿ ಸಂಃ **5** ರಿಂದ ಮು.ಮಾ.**15** ಕಬ್ಬಿಣದ ರಾಡನ್ನು ಪೋಲಿಸರು ಅಮಾನತ್ತು ಮಾಡಿಕೊಂಡ ವಿಷಯ ನನಗೆ ಗೊತ್ತಿಲ್ಲ. ಹಾಗೆಯೇ **6** ನೇ ಆರೋಪಿತನಿಂದ ಮು.ಮಾ.**16** ಕಬ್ಬಿಣದ ರಾಡನ್ನು ಪೋಲಿಸರು ಅಮಾನತ್ತು ಮಾಡಿಕೊಂಡ ವಿಷಯ ನನಗೆ ಗೊತ್ತಿಲ್ಲ. ಈಗ ತೋರಿಸಿದ ನಿಪಿ–**19** ಮತ್ತು **20** ಮಹಜರ್ ರಲ್ಲಿ ಇರುವ ಸಹಿಗಳು ನನ್ನದೇ ಆಗಿದ್ದು ಅವುಗಳನ್ನು ನಿಪಿ–**19** ಬ ಮತ್ತು ನಿಪಿ–**20** ಬ ಎಂದು ಗುರುತಿಸಲಾಯಿತು. ಅವುಗಳನ್ನು ದಿಃ **29–03–2016** ರಂದು ಮದ್ಯಾಹ್ನ ಸುಮಾರು **3.30** ರಿಂದ **4.00** ಗಂಟೆ ಸಮಯದಲ್ಲಿ ಛತ್ರದ ಹಳ್ಳಿ ಕೆರೆಯ ಬಳಿ ನಾನು ಪೋಲಿಸ್ ಜೀಪಿನೊಂದಿಗೆ ಹೋದಾಗ ನನ್ನ ಜೊತೆ ಚಾಸಃ **15** ಸಹ ಇದ್ದರು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂಃ **5** ಮತ್ತು **6** ನ್ನು ನಾನು ಆ ಸಮಯದಲ್ಲಿ ನೋಡಿರುವುದಿಲ್ಲ. ಈಗ ನನಗೆ ತೋರಿಸಿದ ನಿಪಿ–**6** ಪೋಟೋದಲ್ಲಿ ನಾನು ಕಂಡು ಬರುತ್ತೇನೆ. ನಿಪಿ–**6** ರಲ್ಲಿ ಪೋಲಿಸ್ ಅಧಿಕಾರಿಗೆ ಏನನ್ನು ಕೊಡುತ್ತಿರುವ ವ್ಯಕ್ತಿ ಯಾರು ಎಂದು ನನಗೆ ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ಪೋಲಿಸರು ಯಾರಿಂದ ಏನನ್ನು

ತೆಗೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ–19 ಮತ್ತು 20 ಮಹಜರ್ ಗಳಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಚಾಸಃ 27 ರವರು ನನ್ನನ್ನು ಹಾಗೂ ಚಾಸಃ 15 ರವರನ್ನು ಛತ್ರದ ಹಳ್ಳಿಗೆ ಕರೆದುಕೊಂಡು ಹೋಗಿ ಆರೋಪಿ ನಂಃ 5 ಮಹದೇವನು ಘಟನಾ ಸ್ಥಳದ ಪಕ್ಕದಲ್ಲಿರುವ ಪೊದೆಯಿಂದ ಮು.ಮಾ.15 ಹಾಜರುಪಡಿಸಿದ್ದು ಅದನ್ನು ಪೋಲಿಸರು ಮದ್ಯಾಹ್ನ 3.45 ರಿಂದ 4.45 ಗಂಟೆಯವರೆಗೆ ನಿಪಿ–19 ರಂತೆ ಪಂಚನಾಮೆ ಜರುಗಿಸಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ.

ಅದೇ ರೀತಿ ಆರೋಪಿ ನಂಃ 6 ಅದೇ ಕೆರೆಯ ದಕ್ಷಿಣ ದಿಕ್ಕಿನಲ್ಲಿರುವ ಬೆಂಡುಗಿಡಗಳ ಮಧ್ಯದಲ್ಲಿನ ಹೋಗಿ ಅಲ್ಲಿನ ಪೊದೆಯಿಂದ ಮು.ಮಾ.16 ನ್ನು ನನ್ನ ಮತ್ತು ಚಾಸಃ 15 ರವರ ಸಮಕ್ಷಮ ಹಾಜರುಪಡಿಸಿದ್ದು ಅದನ್ನು ಪೋಲಿಸರು ಸಂಜೆ 4.55 ರಿಂದ 5.55 ಗಂಟೆಯವರೆಗೆ ನಿಪಿ–20 ರಂತೆ ಅಮಾನತ್ತು ಪಂಚನಾಮೆ ಬರೆದು ಅದನ್ನು ಸ್ವಾದೀನ ಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ಉದ್ರಿ ಗ್ರಾಮದ ಪಂಚಾಯಿತಿ ಸದಸ್ಯನಾಗಿದ್ದೇನೆ.

ನಿಪಿ–19 ಮತ್ತು 20 ರಲ್ಲಿ ಬರೆದಿರುವ ವಿಷಯಗಳು ಎಲ್ಲಾ ಗೊತ್ತಿದ್ದರೂ ಸಹ, ನಾನು ನ್ಯಾಯಾಲಯದ ಮುಂದೆ ಆರೋಪಿತರ ವಿರುದ್ಧ ಸಾಕ್ಷಿ ನುಡಿದರೆ ಅವರು ನಾಳೆ ನಡೆಯುವ ಚುನಾವಣೆಯಲ್ಲಿ ನನ್ನ ಪರವಾಗಿ ಮತ ಹಾಕುವುದಿಲ್ಲ ಎಂದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 5 ರಿಂದ 7 ನೇ ಆರೋಪಿ ಪರ ಶ್ರೀ.ಬಿಕೆವಿ. ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

<u>ಪಾಟೀ ಸವಾಲುಃ 1 ರಿಂದ 4 ನೇ ಆರೋಪಿ ಪರ ಶ್ರೀ.ಕೆಕೆಎಸ್.    ವಕೀಲರಿಂದಃ</u>

ಪಾಟೀ ಸವಾಲು ಇಲ್ಲವೆಂದು ತಿಳಿಸಿದ್ದಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)